ಶ್ರೀ ಬಿ. ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು):–

ಅ) ನಿಜ

ಆ) ಗೌರಿಬಿದನೂರಿನಲ್ಲಿ 1989 ರಿಂದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯು ಕಾರ್ಯನಿರ್ವಹಿಸುತ್ತಿದೆ, ಒಟ್ಟು ಎರಡು ವೃತ್ತಿಗಳಲ್ಲಿ 120 ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ. ಈ ಸಾಲಿನಲ್ಲಿ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಈ ಸಂಸ್ಥೆಯನ್ನು ಉನ್ನತೀಕರಿಸಲು ಪರಿಗಣಿಸಲಾಗಿದೆ. ಇದರಿಂದ 240 ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಹೆಚ್ಚಿನ ಅವಕಾಶ ಕಲ್ಪಿಸಲಾಗಿದೆ.

ಇ) ಈ ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

212. ಶ್ರೀ ಶ್ರೀನಿವಾಸ್ ಎಂ. :– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಂಡ್ಯ ಜಿಲ್ಲಾ ಆಸ್ಪತ್ರೆಯ ಅಭಿವೃದ್ಧಿ ಮತ್ತು ಅವಶ್ಯಕ ಕಟ್ಟಡ ನಿರ್ಮಾಣ ಯಾವ ಹಂತದಲ್ಲಿದೆ ?

ಆ) ಆಸ್ಪತ್ರೆ ಮತ್ತು ಕಾಲೇಜು ಕಟ್ಟಡಗಳ ಕಾಮಗಾರಿಗಳು ಯಾವ ಹಂತದಲ್ಲಿದೆ ?

ಇ) ಈ ಆಸ್ಪತ್ರೆಗೆ ಪೂರಕವಾಗಿರುವ ವೈದ್ಯಕೀಯ ಕಾಲೇಜನ್ನು ಸುವ್ಯವಸ್ಥಿತಗೊಳಿಸಲು ಸರ್ಕಾರ ಮಂಜೂರು ಮಾಡಿದ ಹಣದ ಮೊತ್ತ ಎಷ್ಟು ? ಕಾಮಗಾರಿಗಳು ವಿಳಂಬವಾಗಲು ಕಾರಣಗಳೇನು ?

ಈ) ಈ ಆಸ್ಪತ್ರೆ ಮತ್ತು ಕಾಲೇಜುಗಳ ಕಟ್ಟಡಗಳನ್ನು ಕೂಡಲೇ ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಬಿ. ಶ್ರೀರಾಮುಲು (ವೈದ್ಯಕೀಯ ಶಿಕ್ಷಣ ಸಚಿವರು):–

ಅ) ಜಿಲ್ಲಾ ಆಸ್ಪತ್ರೆಯ ಹೊಸ ಕಟ್ಟಡ ನಿರ್ಮಾಣ ಕಾರ್ಯಕ್ರಮವಿರುವುದಿಲ್ಲ.

ಆ) ಕಾಲೇಜಿನ ಕಟ್ಟಡದ 1ನೇ ಹಂತದ ಕಾಮಗಾರಿ ಪೂರ್ಣಗೊಂಡಿದೆ, 2ನೇ ಹಂತದ ಕಾಮಗಾರಿ ಪ್ರಗತಿಯಲ್ಲಿದೆ. ಆಸ್ಪತ್ರೆ ಕಟ್ಟಡ ಕಾಮಗಾರಿ ಕಾರ್ಯಕ್ರಮವಿರುವುದಿಲ್ಲ.

ಇ) ರೂ. 58.29 ಕೋಟಿ, ಆಡಳಿತಾತ್ಮಕ ಕಾರಣಗಳು

ಈ) ಎಂ.ಸಿ.ಐ. ನಾರ್ಮ್ಸ್ ಪ್ರಕಾರ ಕಾಲೇಜು ಕಟ್ಟಡ ಕಾಮಗಾರಿಯು ಅವಶ್ಯಕತೆಗೆ ಅನುಗುಣವಾಗಿ ಹಂತ ಹಂತವಾಗಿ ನಿರ್ಮಾಣವಾಗಲು ಕ್ರಮ ಕೈಗೊಳ್ಳಲಾಗಿದೆ.

213. ಶ್ರೀ ಶ್ರೀನಿವಾಸ್ ಎಂ. :– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಮನಗರದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಮಾದರಿ ಆರೋಗ್ಯ ವಿಶ್ವವಿದ್ಯಾನಿಲಯದ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಆ) ಈ ಆರೋಗ್ಯ ವಿಶ್ವವಿದ್ಯಾನಿಲಯ ನಿರ್ಮಾಣದ ಪ್ರಗತಿಯ ವಿವರಗಳೇನು ?

ಶ್ರೀ ಬಿ. ಶ್ರೀರಾಮುಲು (ವೈದ್ಯಕೀಯ ಶಿಕ್ಷಣ ಸಚಿವರು):–

ಅ) 216 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. 145 ಎಕರೆ ಜಮೀನನ್ನು ಕಟ್ಟಡ ನಿರ್ಮಾಣಕ್ಕಾಗಿ ಲೋಕೋಪಯೋಗಿ ಇಲಾಖೆಯ ವಶಕ್ಕೆ ನೀಡಲಾಗಿದೆ. ರೂ. 9.63 ಕೋಟಿಗಳನ್ನು ಭೂ ಸ್ವಾಧೀನಕ್ಕಾಗಿ ಕೆ.ಐ.ಎ.ಡಿ.ಬಿ.ಗೆ ಮತ್ತು ಮೊಬಲೈಜೇಷನ್ ಮುಂಗಡವಾಗಿ ರೂ. 33.37 ಕೋಟಿಗಳನ್ನು ಲೋಕೋಪಯೋಗಿ ಇಲಾಖೆಗೆ ಬಿಡುಗಡೆ ಮಾಡಲಾಗಿದೆ. ಕೆಲವೊಂದು ಸರ್ವೆ ನಂಬರುಗಳಿಗೆ ಸಂಬಂಧಿಸಿದಂತೆ ರಾಜ್ಯ ಉಚ್ಚ ನ್ಯಾಯಾಲಯದ ತಡೆಯಾಜ್ಞೆಗಳು ಇರುತ್ತವೆ. ತಡೆಯಾಜ್ಞೆಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಕೆ.ಐ.ಎ.ಡಿ.ಬಿ.ಗೆ ಸೂಚಿಸಲಾಗಿದೆ. ತನ್ನ ಪಾಲಿನ ರೂ. 50.00 ಕೋಟಿಗಳ ಹಣವನ್ನು ಸಂದಾಯಿಸುವಂತೆ ವಿಶ್ವವಿದ್ಯಾನಿಲಯವನ್ನು ಕೋರಿದೆ.

ಆ) ಭೂ ಸ್ವಾಧೀನ ಕಾರ್ಯ ಪ್ರಗತಿಯಲ್ಲಿದೆ.

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59